– "ಉತ್ತಮ ಕಾರ್ಯ ಮಾಡಿದ ಯಾವನೂ ದುರ್ಗತಿ ಹೊಂದುವುದಿಲ್ಲ" ಎಂದು ಅಭಯ ನೀಡುತ್ತಾನೆ. ಒಟ್ಟಿನಲ್ಲಿ ಹಿಡಿದ ಯಾವುದಾದರೊಂದು ಕೆಲಸವನ್ನು ಸಂಪೂರ್ಣಗೊಳಿಸಲು ಇಚ್ಛಾಶಕ್ತಿಯಂತೆಯೇ, ದೈಹಿಕ–ಮಾನಸಿಕಶಕ್ತಿ, ಏಕಾಗ್ರತೆ, ನಿರಂತರ ಪ್ರಯತ್ನ – ಇವೂ ಅತ್ಯಗತ್ಯ.

"ನಾವೆಷ್ಟು ಸ್ವತಂತ್ರರು! ನಮ್ಮ ಮನಸ್ಸನ್ನು ಕ್ಷಣಕಾಲ ನಿಗ್ರಹಿಸಲಾರೆವು; ಉಳಿದ ವಸ್ತುಗಳನ್ನು ತೊರೆದು ಒಂದು ವಿಷಯದ ಮೇಲೆ ನಿಲ್ಲಿಸಲಾರೆವು! ಆದರೂ ನಮ್ಮನ್ನು ನಾವು ಸ್ವತಂತ್ರರು ಎಂದು ಕರೆದುಕೊಳ್ಳುತ್ತೇವೆ. ಇದನ್ನು ಆಲೋಚಿಸಿ ನೋಡಿ!... ನಿಗ್ರಹಕ್ಕೆ ಒಳಗಾಗದ ಮನಸ್ಸು ಎಂದೆಂದಿಗೂ ನಮ್ಮನ್ನು ಅಧಃಪತನಕ್ಕೆ ಎಳೆಯುವುದು, ನಮ್ಮನ್ನು ಹಿಂಸಿಸುವುದು, ನಮ್ಮನ್ನೇ ನಾಶಮಾಡುವುದು. ನಿಗ್ರಹಿಸಿದ, ಒಳ್ಳೆಯ ದಾರಿಗೆ ತಿರುಗಿಸಿದ ಮನಸ್ಸು ನಮ್ಮನ್ನು ಉದ್ಧಾರ ಮಾಡುವುದು, ಮುಕ್ತರನ್ನಾಗಿ ಮಾಡುವುದು" ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ನಿಗ್ರಹವಿಲ್ಲದೆ ಏಕಾಗ್ರತೆ ಸಿದ್ಧಿಸುವುದಿಲ್ಲ; ಪ್ರಯತ್ನದಲ್ಲಿ ನಿರಂತರತೆಯೂ ಕಾಣಬರುವುದಿಲ್ಲ. ಯಾವ ಶಕ್ತಿಯನ್ನೂ ಉತ್ಪನ್ನ ಮಾಡುವುದಕ್ಕೆ ಆಗುವುದಿಲ್ಲ. ಇರುವ ಶಕ್ತಿಯನ್ನು ಬೇರೆ ಬೇರೆ ದಾರಿಗಳಿಗೆ ತಿರುಗಿಸಬಹುದು. ಆದಕಾರಣ ಈಗಾಗಲೇ ನಮ್ಮಲ್ಲಿರುವ ಅದ್ಭುತಶಕ್ತಿಯನ್ನು ನಿಗ್ರಹಿಸುವುದನ್ನು ಕಲಿತುಕೊಂಡು, ನಮ್ಮ ಇಚ್ಛಾಶಕ್ತಿಯ ಮೂಲಕ, ಅದು ಕೇವಲ ಮೃಗೀಯ ಆನಂದದಲ್ಲಿ ವ್ಯರ್ಥವಾಗದಂತೆ, ಅದನ್ನು ಆಧ್ಯಾತ್ಮಿಕಶಕ್ತಿಯನ್ನಾಗಿ ಪರಿವರ್ತನಗೊಳಿಸಬೇಕು. ಇದನ್ನು ಮಾಡಲು ನೈತಿಕ ಜೀವನ ಅತಿಮುಖ್ಯ.


## ಶ್ರೀರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆ – 571216, ಕೊಡಗು ಜಿಲ್ಲೆ

Phone: 08274-249040, 249555; e-mail: srkseva@gmail.com; wesbite: rkmponnampet.org

# ವಸಂತ ವಿಹಾರ

**(ಬೇಸಿಗೆ ರಜದಲ್ಲಿ ಮಕ್ಕಳಿಗಾಗಿ ವಿವೇಕಾನಂದ ಮೌಲ್ಯವರ್ಧನಾ ಕಾರ್ಯಾಗಾರ)**

**1.5.2012 ರಿಂದ 8.5.2012**

ಪ್ರಿಯ ಸ್ನೇಹಿತರೇ,

ಪೊನ್ನಂಪೇಟೆಯ ಆಶ್ರಮದ ಆವರಣದಲ್ಲಿ ಭಗವಾನ್ ಶ್ರೀರಾಮಕೃಷ್ಣರ ಭವ್ಯವಾದ ವಿಶ್ವಭಾವೈಕ್ಯ ಮಂದಿರವನ್ನು ನಿರ್ಮಿಸಿ ಅದರ ಲೋಕಾರ್ಪಣೆ ನಡೆಸಿದ ಸಂಗತಿ ನಿಮ್ಮೆಲ್ಲರಿಗೂ ಗೊತ್ತೇ ಇದೆ. ಈ ದೇವಾಲಯವನ್ನು ಕೇಂದ್ರಬಿಂದುವಾಗಿಟ್ಟುಕೊಂಡು, ಹಲವಾರು ಸೇವಾಕಾರ್ಯಗಳನ್ನು ಆಶ್ರಮವು ನಡೆಸುತ್ತಿದೆ. ನಮ್ಮ ರಾಮಕೃಷ್ಣ ಸೇವಾಶ್ರಮದ ಆಸ್ಪತ್ರೆಯಲ್ಲಿ ಪ್ರಕೃತಿಚಿಕಿತ್ಸೆ ಮತ್ತು ಯೋಗಕೇಂದ್ರವನ್ನು ಕೂಡ ಆರಂಭಿಸಿದ್ದೇವೆ. ಹಾಗೆಯೇ ಸಮಾಜದ ವಿವಿಧ ಸ್ತರಗಳ ಜನಕ್ಕೆ ಮೌಲ್ಯಶಿಕ್ಷಣ ನೀಡುವ ಕಾರ್ಯಕ್ರಮಗಳನ್ನೂ ನಡೆಸುತ್ತಿದ್ದೇವೆ.

ಸ್ವಾಮಿ ವಿವೇಕಾನಂದರ 150ನೇ ಹುಟ್ಟುಹಬ್ಬದ ಆಚರಣೆಯ ಅಂಗವಾಗಿ 10 ರಿಂದ 15 ವರ್ಷ ವಯಸ್ಸಿನ ಶಾಲಾ ಮಕ್ಕಳಿಗಾಗಿ **'ವಸಂತ ವಿಹಾರ'** ಎಂಬ ಬೇಸಿಗೆ ಶಿಬಿರವನ್ನು 1.5.2012ರಿಂದ 8.5.2012ರವರೆಗೆ ನಡೆಸಲಿದ್ದೇವೆ. ಈ ಶಿಬಿರವು ಬೆಳಗಿನಿಂದ ಸಂಜೆಯವರೆಗೆ ಇರುತ್ತದೆ. ಪರಸ್ಥಳಗಳಿಂದ ಬರುವ ಮಕ್ಕಳಿಗೆ ಆಶ್ರಮದಲ್ಲಿ ಮತ್ತು ಹತ್ತಿರದ ಕೆಲವು ಆವಾಸಿ ಶಾಲೆಗಳಲ್ಲಿ ತಂಗುವ ವ್ಯವಸ್ಥೆಯನ್ನೂ ಮಾಡಲಿದ್ದೇವೆ. ಮಕ್ಕಳಿಗೆ ಯೋಗಾಸನ, ಪ್ರಾಣಾಯಾಮ, ಏಕಾಗ್ರತೆಯನ್ನು ಬೆಳೆಸಿಕೊಳ್ಳುವ ವಿಧಾನ, ವ್ಯಕ್ತಿತ್ವ ವಿಕಾಸ, ಮೌಲ್ಯಶಿಕ್ಷಣ, ಪ್ರಾರ್ಥನೆ ಮುಂತಾದವುಗಳನ್ನು ಹೇಳಿಕೊಡಲಾಗುವುದು.

ನಿಮ್ಮ ಮಕ್ಕಳನ್ನು ಈ ಕಾರ್ಯಕ್ರಮಕ್ಕೆ ಕಳುಹಿಸಿಕೊಡುವುದರಿಂದ ನಮ್ಮ ಸನಾತನ ಧರ್ಮದ ಮೌಲ್ಯಗಳ ಬಗ್ಗೆ ಅವರಿಗೆ ಅರಿವು ಮೂಡುತ್ತದೆ. ಸ್ವಾಮಿ ವಿವೇಕಾನಂದರ ಆಶಯದಂತೆ ಅವರನ್ನು ಯೋಗ್ಯ, ಉಪಯುಕ್ತ ಪ್ರಜೆಗಳನ್ನಾಗಿ ರೂಪಿಸುವುದೇ ನಮ್ಮ ಉದ್ದೇಶ.

**ಶಿಬಿರ ಶುಲ್ಕ : ವಸತಿ ರಹಿತ : ರೂ.300/– ; ವಸತಿ ಸಹಿತ : ರೂ.600/–**

ಪ್ರೀತಿ ಮತ್ತು ಶುಭಾಶಯಗಳೊಂದಿಗೆ,

**ಭಗವತ್ಸೇವೆಯಲ್ಲಿ ತಮ್ಮವ**

**ಸ್ವಾಮಿ ಬೋಧಸ್ವರೂಪಾನಂದ**

**ಅಧ್ಯಕ್ಷರು**


**ಸೂಚನೆ:**


1. **ಅರ್ಹತೆ : 10ರಿಂದ 15 ವರ್ಷ ವಯಸ್ಸಿನ ಶಾಲಾ ವಿದ್ಯಾರ್ಥಿಗಳಿಗೆ ಮಾತ್ರ**
2. **ಮಕ್ಕಳ ವಿವರಗಳೊಂದಿಗೆ ಡಿ.ಡಿ. ಮೂಲಕ ಹಣವನ್ನು ಆಶ್ರಮಕ್ಕೆ ಕಳುಹಿಸಿರಿ.**
3. **ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕ : 25.4.2012**




# ಘೂತ್ಕರಿಸು, ಕಡಿಯಬೇಡ !

ಕಥೆ: ಭಗವಾನ್ ಶ್ರೀರಾಮಕೃಷ್ಣ
ನಿರೂಪಣೆ : ವೈ. ಹರಿಹರನ್
ಚಿತ್ರ : ಶಿವಪ್ರಸಾದ್




5
ಸ್ವಾಮಿ, ನನ್ನನ್ನು ಕ್ಷಮಿಸಿ. ಇದುವರೆಗೂ ನನ್ನ ತಪ್ಪನ್ನು ಯಾರೂ ಎತ್ತಿ ಹೇಳಿರಲಿಲ್ಲ.
ಮಗೂ, ಪ್ರೀತಿಯಿಂದ ಇರು. ಭಕ್ತನಾಗಿರು. ಆದರೆ ಬುದ್ಧಿವಂತನಾಗಿಯೂ ಇರು. ಈ ಮಂತ್ರವನ್ನು ಜಪಿಸುತ್ತಿರು.
“ಇನ್ನು ಮುಂದೆ ನಾನು ಯಾರನ್ನೂ ಕಡಿಯುವುದಿಲ್ಲ. ಈ ಸಂನ್ಯಾಸಿಯೇ ನನ್ನ ಗುರು. ಇವರಂತೆಯೇ ನಾನು ಶಾಂತವಾಗಿರುತ್ತೇನೆ” – ಹೀಗೆ ಹಾವು ತನಗೆ ತಾನೇ ಹೇಳಿಕೊಂಡು ಹುತ್ತದೊಳಗೆ ಹೊರಟು ಹೋಯಿತು.
6
ಅದಾದನಂತರ ಆ ಹಾವು ಯಾರಿಗೂ ತೊಂದರೆ ಕೊಡಲಿಲ್ಲ. ಹೀಗೆಯೇ ಕೆಲವು ದಿನಗಳು ಕಳೆದವು.
ಏ... ತೋಪಿನಲ್ಲಿ ಬಿಸಿಲೇ ಇಲ್ಲ. ಅಲ್ಲಿ ಹೋಗಿ ಆಟ ಆಡೋಣ.
ಅಲ್ಲಿ ಹಾವು ಇದೆಯಲ್ಲೋ!
ತುಂಬಾ ದಿನದಿಂದ ಅದು ಕಾಣುತ್ತಿಲ್ಲ, ಸತ್ತು ಹೋಗಿರಬೇಕು. ಬಾ, ಹೆದರು ಪುಕ್ಕಲ!
7
ಆ ಹುತ್ತದ ಹತ್ತಿರ ಹೋಗಿ ಹುಡುಗರು ನೋಡಿದರು.
ನೋಡ್ರೋ, ಹಾವು ಸಾಧುವಾಗಿಬಿಟ್ಟಿದೆ. ಹುತ್ತದೊಳಗೇ ಇದೆ. ಆದರೆ ಹೊರಗೇ ಬರುತ್ತಿಲ್ಲ!


8 ಹುಡುಗರು ಕೋಲಿನಿಂದ ಹಾವನ್ನು ಹೊರಗೆ ತೆಗೆದರು. ಒಬ್ಬ ಅದರ ಬಾಲ ಹಿಡಿದು ಚೆನ್ನಾಗಿ ಸುತ್ತುತ್ತಿದ್ದಾನೆ; ಮತ್ತೊಬ್ಬ ಅದನ್ನು ಕೋಲಿನಿಂದ ಹೊಡೆಯುತ್ತಾನೆ. ಹಾವು ಜ್ಞಾನತಪ್ಪಿ ಕೆಳಗೆ ಬಿತ್ತು. ತುಂಬ ಸಮಯವಾದ ಮೇಲೆ ಹಾವು ಪ್ರಾಣ ಉಳಿಸಿಕೊಳ್ಳಲು ಎದ್ದೆನೋ ಬಿದ್ದೆನೋ ಎಂದು ಹುತ್ತದೊಳಗೆ ಹೊರಟುಹೋಯಿತು.
ನೋಡ್ರೋ, ಹಾವು ಸಾಧುವಾಗಿ ಹೋಗಿದೆ! ಕಚ್ಚುತ್ತಲೇ ಇಲ್ಲ!
9 ಮೈಮೇಲೆ ತುಂಬಾ ಗಾಯವಾಗಿದ್ದ ಹಾವಿಗೆ ಊಟಕ್ಕಾಗಿ ಕೂಡ ಹೊರಗೆ ಬರಲಾಗಲಿಲ್ಲ. ಹುಡುಗರ ಧ್ವನಿ ಕೇಳಿದಾಗಲೆಲ್ಲಾ ಮತ್ತೆ ಹೊಡೆಯುವರೇನೋ ಎಂಬ ಭಯ, ನಡುಕ ಅದಕ್ಕೆ ಉಂಟಾಗುತ್ತಿತ್ತು.
ಈ ಹುಡುಗರು ತಿಳಿಯದೆ ತಪ್ಪು ಮಾಡುತ್ತಿದ್ದಾರೆ; ಮಾಡಿಕೊಂಡು ಹೋಗಲಿ, ಪಾಪ!
10 ಕೆಲವು ವಾರಗಳು ಕಳೆದ ನಂತರ ಆ ಸಂನ್ಯಾಸಿ ಮತ್ತೆ ಅಲ್ಲಿಗೆ ಬಂದು ಆ ಮಕ್ಕಳು ಆಟ ಆಡುವುದನ್ನು ನೋಡಿದರು.
ಸ್ವಾಮಿ, ನಮ್ಮನ್ನು ಹೆದರಿಸುತ್ತಿದ್ದ ಹಾವು ಸತ್ತು ಹೋಗಿದೆ.
ಇರಲಾರದು ಮಕ್ಕಳೆ, ಅದು ಸತ್ತಿರಲಾರದು. ನಾನು ಅದಕ್ಕೆ ಮಂತ್ರೋಪದೇಶ ಮಾಡಿದ್ದೇನೆ.
11 ಸಂನ್ಯಾಸಿ ಆ ಹುತ್ತದ ಹತ್ತಿರ ಬಂದು,
ನಾಗರಾಜ, ಎಲ್ಲಿದ್ದೀಯಾ? ಬಾ ಹೊರಗೆ.
12 ಹಾವು ಹೊರಗೆ ಬಂತು. ಆದರೆ ಅದರ ಮೈ ತುಂಬಾ ಗಾಯಗಳಾಗಿದ್ದವು. ಅದನ್ನು ನೋಡಿ ಸಂನ್ಯಾಸಿಗೆ ಸಂಕಟವಾಯಿತು.
ಮಗೂ, ಏನಾಯಿತು ನಿನಗೆ? ನಿನಗೆ ಹೀಗೆ ಹಿಂಸೆ ಮಾಡಿದವರು ಯಾರು?